ಗಂಭೀರವಾದದ್ದನ್ನು ನೋಡಿ ಅಪ್ಪನ ಕರುಣಾಜನಕ ಅರಾಜಕ ಸ್ಥಿತಿಗೆ ಮರುಗುವುದು ಬಿಟ್ಟು ಹಾಸ್ಯ ಮಾಡಿಕೊಂಡ ತನ್ನ ಬಗ್ಗೆ ಹೇಸಿಗೆ ಅನಿಸಿತು. ಪರ್ವತೇಶ್ವರದ ಜಮೀನನ್ನು ಮಗನೆಂದು ನಂಬಿದ ಗಜಾನನನ ಹೆಸರಿಗೆ ಉಯಿಲು ಬರೆದರೆಂಬ ಸಾಧ್ಯತೆಯ ಮುಂದಾಲೋಚನೆಯೇ ಅವಳ ಗಾಬರಿಗೆ ಕಾರಣವೇನೊ ಎಂದೂ ಅನಿಸಿತು.

ಈ ಸಂಭಾಷಣೆಯನ್ನು ಕೇಳಿಸಿಕೊಂಡ ಮಾಸ್ತರರ ತರ್ಕ ಬೇರೆಯಾಗಿತ್ತು. ಮಿತ್ರ ಜನಾರ್ದನ ವಿರಚಿತ ಏಕೈಕ ಕಾದಂಬರಿ 'ಪರ್ವತೇಶ್ವರ'ದ ಮುಖ್ಯ ಪಾತ್ರದ ಹೆಸರು ವಿಶ್ವಾಮಿತ್ರ. ಕಾದಂಬರಿಯಲ್ಲಿ ನಿರೂಪಿತವಾದ ಅನುಭವ ಖಾಸಗಿಯಾದದ್ದೆಂದೂ ಪಾತ್ರಗಳು ನಿಜ ವ್ಯಕ್ತಿಗಳಾಗಿದ್ದರಿಂದ ಹೆಸರನ್ನು ಬದಲಾಯಿಸಲಾಗಲಿಲ್ಲವೆಂದೂ ಅದು ಕಾದಂಬರಿಯ ವೇಷದಲ್ಲಿರುವ ಆತ್ಮಚರಿತ್ರೆ ಎಂದೂ, ಕಥೆ ಖಾಸಗಿ ವಾಸ್ತವವಾದ್ದರಿಂದ ಅಪಾಯವನ್ನು ಊಹಿಸಿ ಲೇಖಕ 'ಜಯಶ್ರೀ' ಎಂಬ ಕಾವ್ಯನಾಮವಿಟ್ಟು ಪುಸ್ತಕವನ್ನು ಪ್ರಕಟಿಸಿರುವುದಾಗಿಯೂ ತನ್ನ ಪತ್ತೆದಾರಿ ಸಾಹಸವನ್ನು ಮಾಸ್ತರರು 'ಸುಲಭ ವಾಚನಾಲಯ'ಕ್ಕೆ ಬಂದ ಓದುಗರಿಗೆ ವಿವರಿಸಿದ್ದರು. ಪುಸ್ತಕ ಸಂಗ್ರಹಿಸುವ ಹುಚ್ಚು ಹವ್ಯಾಸ ಅವರಿಗೆ ಮದುವೆ ಬೇಡವೆಂದು ತೀರ್ಮಾನಿಸಿದ ನಂತರ ಆರಂಭವಾಯಿತು. ಕಟ್ಟೆಮನೆಗೆ ಬರುತ್ತಿದ್ದ ಕಾರಂತರು ತಿಂಗಳವರೆಗೆ ಅಟ್ಟದ ಮೇಲೆ ಅಜ್ಞಾತ ಉಳಿದು ಕಾದಂಬರಿ ಬರೆಯುತ್ತಿದ್ದ ಕಾಲದಲ್ಲಿ ಮಾಸ್ತರರ ಉತ್ಸಾಹ ನೋಡಿ ಅವರ ಶಾಲೆಗೆ ಕೆಲವು ಪುಸ್ತಕಗಳನ್ನು ದಾನ ಮಾಡಿದ್ದರು. ಇದೇ ಪ್ರೇರಣೆಯಿಂದ ಕೊನೆಗಾಲದಲ್ಲಿ ವಾರಸುದಾರರಿಲ್ಲದ ತಮ್ಮ ಪುಸ್ತಕಗಳನ್ನು ದೇಣಿಗೆಯ ರೂಪದಲ್ಲಿ ನೀಡಲು ಮುಂದಾದ ಸಾಹಿತಿಗಳನ್ನು ಹುಡುಕಿಕೊಂಡುಹೋಗಿ ಮಾಸ್ತರರು ಗ್ರಂಥ ದಾಸ್ತಾನು ಮಾಡಿದರು. ಕೆಲವೊಮ್ಮೆ ಸೆಕೆಂಡ್‌ಹ್ಯಾಂಡ್ ಸ್ಟೋರ್‌ನಿಂದ ಪುಸ್ತಕ ತರುತ್ತಿದ್ದರು. ನಿವೃತ್ತಿ ವೇತನದ ಸ್ವಲ್ಪ ಭಾಗವನ್ನು ದಿನಪತ್ರಿಕೆಗಳಿಗೆ ವಿನಿಯೋಗಿಸಿ ಕಟ್ಟೆಮನೆ ಪಬ್ಲಿಕ್ ವಾಚನಾಲಯದಲ್ಲಿ ಓದಲು ಇಟ್ಟದ್ದರು.

'ಪರ್ವತೇಶ್ವರ'ವನ್ನು ವಿಶೇಷ ಮುತುವರ್ಜಿ ವಹಿಸಿ ಓದಿಸುತ್ತಿದ್ದರು. ಕಾದಂಬರಿಯಲ್ಲಿ ಸ್ಥಳೀಯ ಓದುಗರ ಊರುಗಳ ಹೆಸರಿದ್ದವು. ಪಾತ್ರ, ಪರಿಸರ ಮತ್ತು ಘಟನೆಗಳು ಅವರ ಅನುಭವಕ್ಕೆ ಪರಿಚಿತವಾಗಿದ್ದವು. ನಮ್ಮೂರಲ್ಲೇ ಒಬ್ಬ ಲೇಖಕಿ ಇದ್ದಾಳೆಂದು ನಮಗೆ ಗೊತ್ತೇ ಇರ್ಲಿಲ್ಲ ಎಂದು ಅಚ್ಚರಿಯ ಅಭಿಮಾನ ಹಂಚಿಕೊಂಡರು. 'ಜಯಶ್ರೀ' ಎಂಬ ಹೆಸರು ಲೇಖಕಿಯದಲ್ಲವೆಂದೂ ತನ್ನ ಮಿತ್ರ ಜನಾರ್ದನ ಅವಧಾನಿಯ ಕಾವ್ಯನಾಮವೆಂದೂ ಗುಟ್ಟನ್ನು ಬಹಿರಂಗಗೊಳಿಸಿದ್ದರು. ಕಾವ್ಯನಾಮದಲ್ಲಿ ಕುಟುಂಬದ ಮೂರು ಸದಸ್ಯರಾದ ಜನಾರ್ದನ, ಹೆಂಡತಿ ಯಮುನಾ ಮತ್ತು ಮಗ ಶ್ರೀಪತಿಯ ಹೆಸರಿನ ಮೊದಲ ಅಕ್ಷರ ಅಡಕವಾಗಿದೆಯೆಂದು ವಿವರಿಸಿದ್ದರು. ಲೇಖಕಿ ಎಂದು ತಿಳಿದ ಕೆಲವರಿಗೆ ಮಾಸ್ತರು ಪ್ರಕಟಿಸಿದ ಸತ್ಯಾಂಶ ನಿರಾಸೆಯನ್ನುಂಟು ಮಾಡಿತ್ತು. ಜನಾರ್ದನ ಕುಮಟೆಗೆ ಬರುವ ಮುಂಚೆಯೇ ಮಾಸ್ತರು 'ಪರ್ವತೇಶ್ವರ'ದ ಕಥೆ ಕಟ್ಟುಕಥೆಯಲ್ಲವೆಂದು ಅದಕ್ಕೆ ಅತ್ಯಂತ ರೋಚಕ ಖಾಸಗಿ ಗುಟ್ಟಿನ ರುಚಿಯ ಗುಣವನ್ನು ಆರೋಪಿಸಿ ಪ್ರಚಾರ ಮಾಡಿದ್ದರು. ಕಾದಂಬರಿ ಲೇಖಕನ ಪಕ್ಕಾ ಆತ್ಮಚರಿತ್ರೆಯೇ ಎಂದು ನಂಬಿದವರು 'ಪರ್ವತೇಶ್ವರ'ವನ್ನು ಕಾಮಶಾಸ್ತ್ರದ ಪುಸ್ತಕದಷ್ಟೇ ಕುತೂಹಲ, ಉದ್ರೇಕದಿಂದ ಓದಿದರು.

'ಪರ್ವತೇಶ್ವರ' ಕಾದಂಬರಿಯು ಛದ್ಮವೇಷದಲ್ಲಿರುವ ಆತ್ಮಚರಿತ್ರೆ ಎಂಬ ಮಾಸ್ತರರ ವಾದವನ್ನು ತಾನು ವಿಶ್ವಾಮಿತ್ರನೆಂದ ಜನಾರ್ದನನ ಹೇಳಿಕೆ ಸಮರ್ಥಿಸಲು ಸಾಕಿತ್ತು.

ಶ್ರೀಪತಿಗೆ ನಿರಾಶೆಯಾಗಿ ಜಗಲಿಗೆ ಬಂದು ಕುಳಿತ. ತಂದೆಯ ಅಸಹಜ ವರ್ತನೆಯಿಂದವನ ಯೋಜನೆಗೆ ತೀವ್ರ ಹಿನ್ನೆಡೆಯಾಗಿತ್ತು. 'ಡಾಕ್ಟರ್ ಏನೊ ಹೇಳಿ ಬಿಡ್ತಾರೆ. ಒಂದು ವಾರ ಆಯ್ತು ತಾನು ಕಟ್ಟೆಮನೇಲಿ ಇದ್ದೇನಂತಾನೆ ಅಪ್ಪಯ್ಯನಿಗೆ ಗೊತ್ತಿಲ್ಲ!' ಶ್ರೀಪತಿ ಹತಾಶೆಯಿಂದ ಗೊಣಗಿದ. ಅವನ ಬೇಸರದ ಜೋಲು ಮೋರೆ ನೋಡಿದ ಮಾಸ್ತರು, 'ನೆನಪು ಬರಿಸುವ ಪ್ರಯತ್ನಾನೇ ಮಾಡದೆ ನಾವು ಕೂತ್ಕಂಡಿದ್ದೇವೆ. ಸ್ವಲ್ಪ ತಡಕಾ. ಒಂದ್ ಕೆಲ್ಸಾ ಮಾಡ್ವಾ. ಸಣ್ಣವರಿದ್ದಾಗ ನಾನು ಅಂವ ಓಡಾಡಿದ ಜಾಗ ಉಂಟು. ಅಲ್ಲೆಲ್ಲ ಒಂದ್ ರೌಂಡ್ ಹಾಕಿ ಬರ್‍ತೇವೆ.' ಶ್ರೀಪತಿ ಉತ್ತೇಜಿತನಾಗಿ, 'ಗಜಾನನನ ಕಾರಲ್ಲಿ ಹೋಗಿಬರುವಾ' ಎಂದ. 'ಕಾರು, ಜೀಪು ಎನೂ ಬ್ಯಾಡ. ಸೈಕಲ್ ಡಬಲ್ ರೈಡಿಂಗ್‌ನಲ್ಲಿ ಕರ್‍ಕಂಡು ಹೋಗ್ತೆ. ನೀವು ಹುಸ್ಕಿ ಬಿಡಿ' ಎಂದು ಮೀನುಪೇಟೆಯ ಚಾಳದ ಬಿಡಾರದಲ್ಲಿದ್ದ ಸೈಕಲ್